# ಕೆರೆಗೆ ಹಾರ

ಡಾ. ರಾ. ಲ. ಜಗದೀಶ

**'ಯಾ**ವ ಗಣಿಯಲ್ಲಿ ಯಾವ ಮಣಿ ಇದೆಯೋ' (ಅಡಗಿರುವುದೋ) ಎಂದು ಪ್ರಾರಂಭವಾಗುವ ಸಾಲುಗಳು 'ಕೆರೆಗೆ ಹಾರ' ಹಳ್ಳಿಯ ಹಾಡಿನಲ್ಲಿರುವ ಮಾಧುರ್ಯದ ಬಗೆಗೆ ಬರೆದಂಥವು. ಶ್ರೀ ತೀ.ನಂ. ಶ್ರೀಕಂಠಯ್ಯನವರು ತಮ್ಮ 'ಸಮಾಲೋಕನ' ಕೃತಿಯಲ್ಲಿ 'ಕೆರೆಗೆ ಹಾರ' ದ ಬಗೆಗೆ ಬರೆದ ವಿಮರ್ಶೆ ಅತ್ಯಂತ ಭಾವಪೂರ್ಣವಾದದ್ದು. ಅದರಲ್ಲಿನ ಕೆಲವು ಆಯ್ದ ಭಾಗಗಳು ಓದುಗರ ಮೇಲೆ ಗಾಢ ಪರಿಣಾಮ ಉಂಟುಮಾಡಬಲ್ಲವು.

ಬಿ.ಎಂ. ಶ್ರೀಕಂಠಯ್ಯನವರು ಸಂಪಾದಿಸಿರುವ 'ಕನ್ನಡದ ಬಾವುಟ' ಎಂಬ ಪದ್ಯಸಂಕಲನದಲ್ಲಿ ಈ 'ಕೆರೆಗೆ ಹಾರ' ಕಾವ್ಯ ಅಚ್ಚಾಗಿದೆ. ಬಾಯಿಂದ ಬಾಯಿಗೆ ಹರಡಿದ್ದ ಹಳ್ಳಿಗರ ಈ ರಚನೆಯನ್ನು ಶ್ರೀಮಾನ್ ಬೆಟಗೇರಿ ಕೃಷ್ಣಶರ್ಮರು ಕೇಳಿ ಸಂಗ್ರಹಿಸಿದ್ದರು. ಶಾಲಾ ಪಠ್ಯಪುಸ್ತಕದಲ್ಲಿ ಪದ್ಯವಾಗಿ ಮಕ್ಕಳಿಗೆ ಇದು ಬಾಯಿಪಾಠವಾಗಿತ್ತು; ಇದನ್ನು ನಾಟಕವಾಗಿಯೂ ಆಡಲಾಗಿತ್ತು. ಕಾಲ ಬದಲಾದಂತೆ, ತ್ಯಾಗ ಮನೋಧರ್ಮದ ಕಲ್ಪನೆಗಳು ಬದಲಾಗಿ ಹೆಣ್ಣಿನ ಶೋಷಣೆಗೆ ಇದರಲ್ಲಿ ಹೆಚ್ಚಿನ ಮಹತ್ವವನ್ನು ನೀಡಲು ಆರಂಭಿಸಲಾಯಿತು. ಹೀಗೆ ಕಾಲಕ್ಕೆ ತಕ್ಕಂತೆ ಅದರ ವಿಮರ್ಶೆಗಳು, ಸ್ವರೂಪಗಳು ಬದಲಾದರೂ ಅದು ಜನರ ಮೇಲೆ ಭಾವನಾತ್ಮಕ ಪರಿಣಾಮವನ್ನು ಉಂಟುಮಾಡುವುದನ್ನಂತೂ ಯಾರೂ ಅಲ್ಲಗೆಳೆಯಲಾರರು.

'ಕೆರೆಗೆ ಹಾರ' ಒಂದು ಕೋಲಾಟದ ಪದ. ಅದನ್ನು ರಚಿಸಿದವರು ನಾಗರಿಕ ಜೀವನವನ್ನು ತಿಳಿಯದವರು. ಅವರು ಕಂಡದ್ದನ್ನು, ಅನುಭವಿಸಿದ್ದನ್ನು ಕಾವ್ಯರೂಪದಲ್ಲಿ ಹಾಡುತ್ತಿದ್ದರೇನೋ. ಇದಕ್ಕೆಲ್ಲ ಪೂರಕವಾಗಿ ಸೋಮವಾರಪೇಟೆಯ (ಕೊಡಗು ಜಿಲ್ಲೆ) ದೊಡ್ಡಮಳ್ತೆ ಗ್ರಾಮದಲ್ಲಿರುವ ಹೊನ್ನಮ್ಮನ ಕೆರೆ ಹಾಗೂ ದೇವಾಲಯಗಳು 'ಕೆರೆಗೆ ಹಾರ'ಕ್ಕೆ ಸಾಕ್ಷಿಯಾಗಿ ಉಳಿದಿವೆ. ಆ ಪರಿಸರವನ್ನು ನೋಡಿದಾಗ 'ಹೊನ್ನಮ್ಮ', 'ಭಾಗೀರಥಿ' – ಈ ಹೆಸರುಗಳು ಆ ಬಲಿದಾನವನ್ನು ಸೂಚಿಸುವ ನಾಮಧೇಯಗಳಾಗಷ್ಟೆ ಉಳಿಯುವುದಿಲ್ಲ. ಏಕೆಂದರೆ, ಅಲ್ಲಿರುವ ಶಾಸನ, ಮಾಸ್ತಿಕಲ್ಲು, ವೀರಗಲ್ಲುಗಳು ಇಂದಿಗೂ ಆ ಮಹಾತಾಯಿಯ ತ್ಯಾಗದ ಕುರುಹಾಗಿ ನಿಂತಿವೆ.

ನಾಡಿನ ಕ್ಷೇಮಕ್ಕಾಗಿ ಕೆಲಸಗಳನ್ನು ಕೈಕೊಂಡಾಗ ಅಡೆತಡೆಗಳು ಒದಗುವುದು ಸಹಜ. ದನಕರುಗಳಿಗೂ ಪೈರುಪಚ್ಚೆಗಳಿಗೂ ನೀರು ಒದಗಲೆಂದು ಬಲು ವೆಚ್ಚದಿಂದ ಕೆರೆ ಕಟ್ಟಿಸಿದರೆ ನೀರೇ ಬಾರದಿರಬಹುದು. ಇಂಥ ಸಂದರ್ಭದಲ್ಲಿ ನಮ್ಮ ಪೂರ್ವಿಕರು ಇಲ್ಲೇನೋ ದೈವಿಕವಾದ ಕಾರಣವಿರಬೇಕೆಂದು ನಂಬಿ ಜೋಯಿಸರನ್ನು ವಿಚಾರಿಸುತ್ತಿದ್ದರು. ಗ್ರಹಶಾಂತಿಯನ್ನೋ ಭೂತಬಲಿಯನ್ನೋ ನಡೆಸಿ ಮುಂದುವರಿಯುತ್ತಿದ್ದರು. ಊರಿನ ಹಿತಕ್ಕಾಗಿ ಆಗಿನ ಬಲ್ಲವರು ಹೇಳಿದ ತ್ಯಾಗಕಾರ್ಯವನ್ನು – ಅದು ಎಷ್ಟೇ ಕಠಿಣವಾಗಿದ್ದರೂ – ಕೈಗೊಳ್ಳಲು ಅವರು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಇಂಥ ಸನ್ನಿವೇಶವೇ 'ಕೆರೆಗೆ ಹಾರ' ಕಥೆಯ ಹಿನ್ನೆಲೆ.

ಕಲ್ಲನಕೇರಿ ಮಲ್ಲನಗೌಡ ಕೆರೆಯೊಂದ ಕಟ್ಟಿಸ್ಯಾನು
ಕೆರೆಯೊಂದ ಕಟ್ಟಿಸ್ಯಾನು ಸೆರೆಮುಕ್ಕ ನೀರಿಲ್ಲ
ಸೆರೆಮುಕ್ಕ ನೀರಿಲ್ಲ ಹೊತ್ತಿಗೆ ತೆಗೆಸ್ಯಾರು
ಹೊತ್ತಿಗೆ ತೆಗೆಸ್ಯಾರು ಜೋಯಿಸ ಕೇಳ್ಯಾರು.

ಹೊತ್ತಿಗೆಯನ್ನು ತೆಗೆಸಿ ಪ್ರಶ್ನೆ ಮಾಡಿದಾಗ ಜೋಯಿಸರು, ಇದು ದೇವರ, ದೆವ್ವದ ಕಾಟ ಯಾವುದೂ ಅಲ್ಲ; ಹಿರಿ ಸೊಸೆ ಮಲ್ಲವ್ವನನ್ನು ಹಾರವ ಕೊಡಬೇಕು ಎನ್ನುವರು. ಹಾರ ಎಂದರೆ ಆಹಾರ ಎಂದು. ಅವಳನ್ನು ಆಹಾರವಾಗಿ ಬಲಿಕೊಟ್ಟರೆ ಕೆರೆಗೆ ನೀರು ಬರುತ್ತದೆ ಎನ್ನುವುದು ಜೋಯಿಸರ ಅಭಿಪ್ರಾಯ. ಗೌಡ ಇದರಿಂದ ಚಿಂತೆಗೀಡಾದ. ಹಿರಿಯ ಸೊಸೆಯನ್ನು ಹಾರವಾಗಿ ಕೊಟ್ಟರೆ ಮನೆತನದ ಹಿರಿಯ ಸಂತತಿಯ ಗತಿ ಏನು? ಬಲಿಯಂತೂ ಕೊಡಲೇಬೇಕು, ಇಲ್ಲದಿದ್ದರೆ ಧರ್ಮಕಾರ್ಯ ನಿಲ್ಲಿಸಿದ ಅಪಕೀರ್ತಿ. ಹಾಗಾದರೆ ಈಗ ಏನು ಮಾಡಬೇಕು?

ಕಡೆ ಸೊಸಿ ಭಾಗೀರಥಿಯನ್ನು ಹಾರವ ಕೊಡಬೇಕು
ಹಾರ ಕೊಡಬೇಕಂತ ಮಾತಾತು ಮನೆಯಾಗ

ಮನೆಯಲ್ಲಿ ನಡೆದ ಮಾತುಕಥೆ ಭಾಗೀರಥಿಯ ಕಿವಿಗೆ ಬೀಳದಿರುತ್ತದೆಯೇ? ಹಿರಿಯರು ಅವಳಿಗೆ ನೇರವಾಗಿ ಹೇಳಲಾರರು. ಅವಳೂ ಕೇಳಲಾರಳು. ಅದು ಸಂಪ್ರದಾಯಕ್ಕೆ ವಿರೋಧ. ಈ ವಿರೋಧಾಭಾಸದ ನಡುವೆ ತವರುಮನೆಗೆ ಹೋಗುವ ಆಸೆ ಭಾಗೀರಥಿಗೆ.

ಸಣ್ಣ ಸೊಸಿ ಭಾಗೀರಥಿ ತವರಮನೆಗೆ ಹೊರಟಳು
ಅತ್ತೆವ್ವಾ ನಾ ನಮ್ಮ ತವರು ಮನೆಗೆ ಹೋಗಲೇನು
"ಸತ್ರನೆ ಹೋಗವ್ವಾ ಭತ್ರನೆ ಬಾರವ್ವಾ"

ಲೇಖಕರು ಮಂಡ್ಯ ಜಿಲ್ಲೆಯ ತೂಬಿನಕೆರೆಯಲ್ಲಿರುವ ಮೈಸೂರು ವಿಶ್ವವಿದ್ಯಾನಿಲಯದ ಸರ್. ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರದ ಪಾಲಿಮರ್ ವಿಜ್ಞಾನ ವಿಭಾಗದಲ್ಲಿ ಉಪನ್ಯಾಸಕರಾಗಿದ್ದಾರೆ.



ಅತ್ತೆ ಮಾವಂದಿರೇನು ಕಟುಕರಲ್ಲ. ಆದರೆ ಅವರೇನು ಮಾಡಿಯಾರು? ಸೊಸೆಗೆ ತವರುಮನೆಗೆ ಹೋಗಲು ಒಪ್ಪಿಗೆ ಕೊಟ್ಟರು.

**ಸಣ್ಣ ಸೊಸಿ ಭಾಗೀರಥಿ ತವರುಮನೆಗೆ ಹೋದಾಳು**
**ಮನೆ ಮುಂದೆ ಹೋಗುದಕ ಅವರಪ್ಪ ಬಂದಾನು**
**"ಎಂದಿಲ್ಲದ ಭಾಗೀರಥಿ ಇಂದ್ಯಾಕೆ ಬಂದೆವ್ವ**
**ಬಾಡಿದ ಮೋರ್ಯಾಕ ಕಣ್ಣಾಗ ನೀರ್ಯಾಕ"**

ಭಾಗೀರಥಿ ತನ್ನೊಡಲ ದುಃಖವನ್ನು ಹೇಗೆ ತಾನೆ ನೇರವಾಗಿ ಹೇಳುತ್ತಾಳೆ?! ನಮ್ಮ ಅತ್ತೆ ಮಾವ ನನ್ನನ್ನು ಬೇರೆ ಇಡುತ್ತಾರಂತೆ ಎಂದು ಉತ್ತರ ಕೊಟ್ಟಳು.

ಅದಕ್ಕೆ ತಂದೆಯ ಪ್ರತಿಕ್ರಿಯೆ ಇದು: **"ಇಟ್ಟರೆ ಇಡಲೇಳು ಹೊಲ ಮನಿ ಕೊಡತೀನು"**. ಮಗಳ ಕೋಮಲ ಹೃದಯ ಅವನಿಗೆ ಅರ್ಥವಾಗಲಿಲ್ಲ. ತಂದೆಯ ದರ್ಪದ ಮಾತು ಮಗಳಿಗೆ ಇಷ್ಟವಾಗಲಿಲ್ಲ. **'ಹೊಲಮನಿ ಒಯ್ದು ಹೊಳೆದಂಡ್ಯಗ್ಹಾಕಪ್ಪ'** ಎಂದು ನೋವಿನಿಂದ ಹೇಳಿ ತಾಯಿಯ ಬಳಿ ತೆರಳಿದಳು. ತಾಯಿ ಒಲೆಯ ಒಂದು ಜೊತೆಯನ್ನು ಕೊಡುತ್ತೇನೆಂದಳು. ಭಾಗೀರಥಿಗೆ ನೆಮ್ಮದಿ ದೊರೆಯಲಿಲ್ಲ, **"ವಾಲೀಯ ಜೋಡೊಯ್ದು ಒಲಿಯಾಗ ಹಾಕವ್ವ"** ಎಂದು ಮಾತು ಮುಗಿಸಿದಳು. ಅಕ್ಕ ತನ್ನ ಮಕ್ಕಳನ್ನು ಕಳಿಸ್ತೇನೆ ಎಂದಳು. ಇವರ್ಯಾರಿಗೂ ಭಾಗೀರಥಿಯ ಹೃದಯದ ತಳಮಳವನ್ನು ಅರಿಯಲಾಗಲಿಲ್ಲ.

**ಸಣ್ಣ ಸೊಸಿ ಭಾಗೀರಥಿ ತವರಮನಿಯ ಬಿಟ್ಟು**
**ತವರಮನಿಯ ಬಿಟ್ಟು ಗೆಣತಿ ಮನೆಗೆ ನಡೆದಳು**
**ತಲೆಬಾಗಿಲದಾಗ ಗೆಳತಿನ್ನ ಕಂಡಳು**

**"ಎಂದಿಲ್ಲದೆ ಭಾಗೀರಥಿ ಇಂದ್ಯಾಕೆ ಈ ಅಳುವು"** ಎನ್ನುತ್ತಾಳೆ ಗೆಳತಿ. ಕಾರಣ ಕೇಳುತ್ತಾಳೆ. **"ಅಂಜಬೇಡ ಗೆಳತಿ ಅಳುಕಬೇಡ ಗೆಳತಿ"** ಎಂಬುದು ಗೆಳತಿಯ ಧೈರ್ಯದ ಆಶ್ವಾಸನೆ. ಹೃದಯವನ್ನು ತೆರೆದು ವಿಷಯವನ್ನು ಅರುಹುತ್ತಾಳೆ ಭಾಗೀರಥಿ: **"ನಮ್ಮತ್ತೆ ನಮ್ಮಾವ ಕೆರೆಗ್ಹಾರ ಕೊಡುತಾರಂತ"**. **"ಕೊಟ್ಟರೆ ಕೊಡಲೇಳು ಇಟ್ಹಾಂಗ ಇರಬೇಕು"** ಎಂಬುದೇ ಗೆಳತಿಯ ಬುದ್ಧಿವಾದ. ದುಗುಡ ಅಡಗಿ ನಿಶ್ಚಯವನ್ನು ನೆಲೆಗೊಳಿಸಿದಳು ಗೆಳತಿ. ಬಲಿದಾನಕ್ಕಾಗಿ ಎದೆಯನ್ನು ಗಟ್ಟಿಮಾಡಿಕೊಂಡು ಈ ಸಣ್ಣ ಸೊಸೆ ಅತ್ತೆಯ ಮನೆಗೆ ಹಿಂದಿರುಗಿದಳು.

ಮಹಾತ್ಯಾಗದ ದಿನ 'ಗಂಗವ್ವನ ಪೂಜೆ' ಗಾಗಿ ಏರ್ಪಾಡು ನಡೆಯುತ್ತಿದೆ.

**ಬ್ಯಾಳಿಯ ಹಸಮಾಡ್ತ ಬಿಟ್ಟಾಳು ಕಣ್ಣೀರ**
**"ಎಂದಿಲ್ಲದೆ ಭಾಗೀರಥಿ ಇಂದ್ಯಾಕ ಕಣ್ಣೀರು"**
**"ಬ್ಯಾಳ್ಯಾಗಿನ ಹಳ್ಳು ಬಂದು ಕಣ್ಣಾಗೆರಚಿದವು ಮಾವಾ"**

ಧೀರೆ ಭಾಗೀರಥಿ ಏನೋ ನೆವ ಹೇಳಿ ತನ್ನ ಮನೋದಾರ್ಢ್ಯವನ್ನು ಸ್ಥಿರಪಡಿಸಿಕೊಳ್ಳುತ್ತ ಇರುತ್ತಾಳೆ. ಅಕ್ಕಿಯೊಳಗಿನ ಹರಳು ಬಂದು ಕಣ್ಣಿಗೆ ಬಿತ್ತೆಂದು ಮಾತನ್ನು ತೇಲಿಸುತ್ತಾಳೆ.

ಆ ದಿನ ದೊಡ್ಡ ಹಬ್ಬದಡುಗೆ. ಜಳಕಕ್ಕಾಗಿ ಹತ್ತು ಕೊಪ್ಪರಿಗೆ ನೀರು ಉಕ್ಕಿ ಮರಳುತ್ತಿದೆ. ನಿಂಗವ್ವ, ನೀಲವ್ವ ಮೊದಲಾದ ದೊಡ್ಡ ಸೊಸೆಯರನ್ನೆಲ್ಲಾ ಕ್ರಮವಾಗಿ ಕರೆದು, "ನೀನು ಜಳಕ ಮಾಡು, ನೀನು ಮಾಡು" ಎಂದು ಹಿರಿಯರು ಹೇಳುತ್ತಿದ್ದಾರೆ. ಆದರೆ ಆ ದಿನ ನೀರೆರೆದುಕೊಂಡು, ಸಿಂಗರಿಸಿಕೊಂಡು ತನ್ನಲ್ಲಿಗೆ ಬಂದವರನ್ನೇ ಗಂಗಾದೇವಿ ಆರಿಸಿಕೊಳ್ಳುವಳೆಂದು ಎಲ್ಲರೂ ಬಲ್ಲರು.

ಆದಕಾರಣ,

**"ನಿಂಗವ್ವ – ನಾನೊಲ್ಲೆ; ನೀಲವ್ವ – ನಾನೊಲ್ಲೆ;**
**ಗಂಗಮ್ಮ – ನಾನೊಲ್ಲೆ; ಗವರವ್ವ – ನಾನೊಲ್ಲೆ"**
**"ಸಣ್ಣ ಸೊಸಿ ಭಾಗವ್ವ ನೀನರೆ ಜಳಕ ಮಾಡ"**
**ಸಣ್ಣ ಸೊಸಿ ಭಾಗೀರಥಿ ಜಳಕನ ಮಾಡ್ಯಾಳು**
**ಜಳಕನ ಮಾಡ್ಯಾಳು ಬಂಗಾರ ಬುಟ್ಟಿ ತುಂಬ್ಯಾಳು**
**ಬಂಗಾರ ಬುಟ್ಟಿ ತುಂಬ್ಯಾಳು ಸಿಂಗಾರ**
**ಸಿಂಬಿ ಮಾಡ್ಯಾಳು**
**ಸಿಂಗಾರ ಸಿಂಬಿ ಮಾಡ್ಯಾಳು**
**ಮುಂದ ಮುಂದ ಹೊರಟ್ಯಾಳು**
**ಮುಂದ ಮುಂದ ಭಾಗೀರಥಿ ಹಿಂದ್ಲಿಂದ ಎಲ್ಲರೂ**

ಇನ್ನೂ ಬಯಲಾಗಿಯೇ ಒಣಗಿದ್ದ ಕೆರೆಯ ಅಂಗಳದಲ್ಲಿ ಪೂಜೆಯಾಯಿತು, ನೈವೇದ್ಯ ಆಯಿತು. ಎಲ್ಲರೂ ಹೊರಟು ಬರುವಾಗ ಬಂಗಾರದ ಬಟ್ಟಲನ್ನು ಕೆರೆಯಲ್ಲಿ ಮರೆತರು. ನಂತರ ಜ್ಞಾಪಿಸಿಕೊಂಡು, **"ಗಂಗವ್ವ ನೀ ಹೋಗ, ಗೌರವ್ವ ನೀ ಹೋಗ"** ಎಂದು ಮುಂತಾಗಿ ಒಬ್ಬೊಬ್ಬ ಸೊಸೆಗೂ ಬಟ್ಟಲನ್ನು ತರಲು ಹೇಳಿದರು. ಆದರೆ ಎಲ್ಲರೂ ಒಲ್ಲೆ ಎಂದರು.

**"ಸಣ್ಣ ಸೊಸಿ ಭಾಗೀರಥಿ ನೀ ತರ ಹೋಗವ್ವ"**
**ಸಣ್ಣ ಸೊಸಿ ಭಾಗೀರಥಿ ಬಿರ ಬಿರ ನಡೆದಾಳು**

ಬಿರಿ ಬಿರಿ ಹೋದಳು ಬಂಗಾರ ಬಟ್ಲ ತಗೊಂಡಳು
ಒಂದು ಮೆಟ್ಲೇರುದಕ ಪಾದಕ ಬಂದಳು ಗಂಗಿ
ಎರಡು ಮೆಟ್ಲೇರುದಕ ಪಾದ ಮುಳಿಗಿಸ್ಯಾಳು ಗಂಗಿ
ಮೂರು ಮೆಟ್ಲೇರುದಕ ಪಾದ ಮೊಣಕಾಲಿಗೆ
ಬಂದಳು ಗಂಗಿ
ನಾಕು ಮೆಟ್ಲೇರುದಕ ನಡುಮಟ ಬಂದಳು ಗಂಗಿ
ಐದು ಮೆಟ್ಲೇರುದಕ ತುಂಬಿ ಹರಿದಾಳು ಗಂಗಿ
ಸಣ್ಣ ಸೊಸಿ ಭಾಗೀರಥಿ ಕೆರಿಗ್ಹಾರವಾದಳು

ಬಲಿ ಸಮರ್ಪಣೆ, ಬಲಿ ಸ್ವೀಕಾರ ಎರಡೂ ನಯವಾಗಿ ನೆರವೇರಿತು. ಇಷ್ಟೆಲ್ಲಾ ಆಗುವಾಗ ಭಾಗೀರಥಿಯ ಗಂಡ ಏನು ಮಾಡುತ್ತಿದ್ದ? ಹೆಂಡತಿಯೊಡನೆ ಸಮಾಧಾನದ ಮಾತು ಆಡಲೇ ಇಲ್ಲವಲ್ಲ? ಭಾಗೀರಥಿಯ ಗಂಡ ಊರಿನಲ್ಲಿರಲಿಲ್ಲ.

ಗಂಡ ಮಾದೇವರಾಯ ದಂಡಿನಾಗೈದಾನು

ಅವನು ಎಷ್ಟು ದೂರದಲ್ಲಿದ್ದನೋ, ಊರು ಬಿಟ್ಟು ಎಷ್ಟು ದಿನವಾಗಿತ್ತೋ. ದಂಡಿನಲ್ಲಿದ್ದವನಿಗೆ ಮಡದಿಯ ಜಲಸಮಾಧಿ ಕನಸಿನಲ್ಲಿ ಅರಿವಾಯಿತು.

ಕಂಡನು ಕೆಟ್ಟ ಕನಸ
ನೆಲ್ಲ ಸುಟ್ಹಾಂಗಾತು ಕೋಲು ಮುರಿದ್ಹಾಂಗಾತು
ಕಟ್ಟಿಸಿದ ಮಾಲೆಲ್ಲಾ ತಟ್ಟನೆ ಬಿದ್ಹಾಂಗಾತು

ಮಡದಿ ಮಡಿದ ಮೇಲೆ, ಕಟ್ಟಿಸಿದ ಮಹಲು ಕುಸಿದ ಹಾಗೆ ತಾನೆ.

ಗಂಡ ಮಾದೇವರಾಯ ಹತ್ತಿದ ಬತ್ತಲೆಗುದುರಿ

ಬತ್ತಲೆ ಕುದುರೆ ಆತನ ತವಕ, ಆತಂಕಗಳನ್ನು ವ್ಯಕ್ತಪಡಿಸುತ್ತದೆ. ಕುದುರಿಗೆ ಜೀನು ಹಾಕುವಷ್ಟು ಕಾಲ ವಿಳಂಬ ಮಾಡಲಿಲ್ಲ. ನಾಗಾಲೋಟದಲ್ಲಿ ಊರಿಗೆ ಬಂದಿದ್ದಾನೆ. ಬಂದ ಮಾದೇವನ ತಂದೆತಾಯಿ ನೋಡಿದರು:

"ಗಂಗವ್ವ ನೀರ ಕೊಡ ಗವರವ್ವ ನೀರ ಕೊಡ"
"ಗಂಗವ್ವ ನೀರು ಕೊಡುದ್ಯಾಕ ಗವರವ್ವ
ನೀರು ಕೊಡುದ್ಯಾಕ
ನನ್ನ ಮಡದಿ ಭಾಗೀರಥಿ ಎಲ್ಲಿಗ್ಹೋಗ್ಯಾಳಪ್ಪ"

ದಿಟ, ಭಾಗೀರಥಿಯನ್ನು ಹಿರಿಯ ತವರಿಗೆ ಕಳುಹಿಸಿ ಬಿಟ್ಟಿದ್ದಾರೆ.

ಹಾಗಿಂದ ಹಾಗೆಯೇ ಆತ ಬತ್ತಲ ಕುದುರೆ ಮೇಲೆ ಅತ್ತೆಯ ಮನೆಗೆ ಹೋದನು. ಅಲ್ಲಿ ನೀರು ಕೊಡಲು ನಿಂಬೆವ್ವ, ನೀಲವ್ವರಿಗೆ ಅತ್ತೆ ಹೇಳಿದಳು. ಮಡದಿ ಎಲ್ಲಿ ಎಂದು ಕೇಳಿದ್ದಕ್ಕೆ, **"ನಿನ್ನ ಮಡದಿ ಗೆಣತಿ ಮನೆಗೆ ಹೋಗ್ಯಾಳಪ್ಪ"** ಎಂದು ಅತ್ತೆ ಉತ್ತರಿಸಿದಳು.

ಗೆಳತಿಯ ಮನೆಯಲ್ಲಿ, **"ಬಾಳವ್ವ ನೀರ ಕೊಡ, ಬಸವ್ವ ನೀರ ಕೊಡ"** ಎಂಬ ಮಾತು ಕೇಳಿ, ಮತ್ತೆ ಅದೇ ಪ್ರಶ್ನೆ ಕೇಳುತ್ತಾನೆ. ಆಗ ಗೆಳತಿ ಉತ್ತರಿಸುತ್ತಾಳೆ,

"ನಿನ್ನ ಮಡದಿ ಭಾಗೀರಥಿದು ಏನು ಹೇಳಲಿ ಸೂರಿ
ನಿಮ್ಮಪ್ಪ ನಿಮ್ಮವ್ವ ಕೆರಿಗ್ಹಾರ ಕೊಟ್ಟರಂತೆ"



ಸಂದೇಹ ದೃಢವಾಯಿತು; ಹೃದಯ ಬರಿದಾಯಿತು. ತನ್ನ ಎದೆಯಲ್ಲಿ ಹತ್ತಿ ಉರಿಯುತ್ತಿದ್ದ ಬೆಂಕಿಯನ್ನು ನಂದಿಸಲು ಅವನಿಗೆ ಒಂದೇ ದಾರಿ ತೋರಿತು.

ಗಂಡ ಮಾದೇವರಾಯ ಹತ್ತಿದ ಬತ್ತಲೆಗುದುರಿ
ಹತ್ತಿದ ಬತ್ತಲೆಗುದುರಿ ಹೊಂಟಾನು ಹೌಹಾರಿ
ಕೆರೆಯ ದಂಡೆಗೆ ಬಂದು ಕಣ್ಣೀರ ಇಟ್ಟಾನು.
ಕಣ್ಣೀರು ಇಟ್ಟಾನು ನಿಟ್ಟುಸಿರು ಬಿಟ್ಟಾನು
"ಸಾವಿರ ವರಹ ಕೊಟ್ಟರು ಸಿಗಲಾರದ ಸತಿ ನೀನು
ಸಿಗಲಾರದ ಸತಿ ನೀನು ನನ ಬಿಟ್ಟು ಎಲ್ಲಿ ಹೋದೆ.
ಮುನ್ನೂರು ವರಹಾ ಕೊಟ್ಟು ಮುತ್ತಿನೋಲೆ ಮಾಡಿಸಿದ್ದೆ
ಮುತ್ತಿನೋಲೆ ಇಟಗೊಳ್ಳೊ ಮುತ್ತೈದೆ ಎಲ್ಲಿಗ್ಹೋದೆ."
ಇಷ್ಟು ಮಾತನಾಡಿ ಮಾದೇವ ಬಿಟ್ಟಾನು ಕಣ್ಣೀರು
ಬಿಟ್ಟಾನು ಕಣ್ಣೀರ, ಹಾರಿದ ಕೆರೆ ನೀರಾಗ

ಮಡದಿಯ ಬಲಿದಾನದಿಂದ ನೀರು ತುಂಬಿ ತುಳುಕುತ್ತಿದ್ದ ಕೆರೆಗೆ ಹಾರಿ ಅವಳನ್ನು ಮತ್ತೆ ಕೂಡಿಕೊಂಡನು. ಇಲ್ಲಿಗೆ ಕಥೆ ಮುಗಿಯಿತು.

ಸೋಮವಾರ ಪೇಟೆಯ ಹೊನ್ನಮ್ಮನ (ಭಾಗೀರಥಿ) ಕೆರೆಯ ಆಸುಪಾಸಿನಲ್ಲಿ ಶಿಲಾಯುಗಕ್ಕೆ ಸೇರಿದ ಸಮಾಧಿಗಳು ದೊರೆತಿವೆ. ಅಂದರೆ ಅಲ್ಲಿಯ ಇತಿಹಾಸ ಪುರಾತನ. ಅಲ್ಲಿರುವ ದೇವಾಲಯದ ಹೊನ್ನಮ್ಮನ ಮೂರ್ತಿ, ಬೆಟ್ಟಗುಡ್ಡಗಳು, ವಿಶಾಲವಾದ ಕೆರೆ ನಮ್ಮ ಮನಸ್ಸಿನಲ್ಲಿ ಎಲ್ಲೋ ಭಾಗೀರಥಿ ಹಾಗೂ ಅವಳ ಗಂಡನ ಬಗ್ಗೆ ಮಿಡಿಯುವಂತೆ ಮಾಡುತ್ತವೆ. ಅವಳ ಬಾಳಿನಲ್ಲಿ ಗೆಳತಿಗೆ ದೊರೆತಿರುವ ಅಪೂರ್ವ ಸ್ಥಾನ, ಭಾಗೀರಥಿಯ ಮನೋದಾರ್ಢ್ಯ, ಮಾದೇವರಾಯನ ಅಪರಿಮಿತ ಪ್ರೇಮ – ಈ ಎಲ್ಲವನ್ನೂ ನಮ್ಮ ಕಣ್ಣಿಗೆ ಕಟ್ಟಿದ ಹಾಗೆ ಹಳ್ಳಿಯ ಅಜ್ಞಾತ ಕವಿ ಹಾಡಿನ ರೂಪದಲ್ಲಿ ಕಟ್ಟಿದ್ದಾನೆ. ಈ ಎಲ್ಲ ದೃಷ್ಟಿಯಿಂದಲೂ, 'ಕೆರೆಗೆ ಹಾರ' ಕನ್ನಡ ಕಾವ್ಯಶ್ರೀಯ ಕಂಠದ ಹಾರ.